ಹದಗೆಟ್ಟ ರಸ್ತೆ: ಸಂಚಾರಕ್ಕೆ ನಾನಾ ತೊಡಕು

ವಿದ್ಯಾಪೀಠ ವೃತ್ತದ ಸುತ್ತಮುತ್ತ ಕುಂಟುತ್ತಾ ಸಾಗಿದ ವೈಟ್ ಟಾಪಿಂಗ್, ಕೊಳವೆ ಅಳವಡಿಕೆ ಕಾಮಗಾರಿ

• ವರುಣ ಹೆಗಡೆ

ಬೆಂಗಳೂರು: ಒಂದೆಡೆ, ಕುಂಟುತ್ತಾ ಸಾಗುತ್ತಿರುವ ವೈಟ್ ಟಾಪಿಂಗ್ ಕಾಮಗಾರಿ. ಇನ್ನೊಂದೆಡೆ, ಕೊಳವೆಗಳ ಅಳವಡಿಕೆಗಾಗಿ ನಿರಂತರ ಅಗೆತ. ಮತ್ತೊಂದೆಡೆ, ದೂಳಿನಿಂದ ಕೂಡಿದ ರಸ್ತೆಯಲ್ಲಿ ಸಾಗಲು ಹರಸಾಹಸ ಪಡುವ ವಾಹನಸವಾರರು.

ಇದು ವಿದ್ಯಾಪೀಠ ವೃತ್ತದ ಸುತ್ತಮುತ್ತಲಿನ ಸ್ಥಿತಿ. ಹೊರ ವರ್ತುಲ ರಸ್ತೆಯಿಂದ (ಹೊಸಕೆರೆಹಳ್ಳಿ) ವಿದ್ಯಾಪೀಠ ವೃತ್ತದವರೆಗೆ (80 ಅಡಿ ರಸ್ತೆ) 2.7 ಕಿ.ಮೀ. ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭವಾಗಿ ಹತ್ತು ತಿಂಗಳು ಕಳೆದರೂ ಪೂರ್ಣಗೊಂಡಿಲ್ಲ. ಸದ್ಯ 1.5 ಕಿ.ಮೀ. ಮಾತ್ರ ವೈಟ್ ಟಾಪಿಂಗ್ ಕಾಮಗಾರಿ ನಡೆದಿದೆ. ಬ್ಯಾಂಕ್ ಕಾಲೊನಿವರೆಗೆ ಸುಸಜ್ಜಿತ ರಸ್ತೆ ನಿರ್ಮಾಣವಾಗಿದೆ. ಆದರೆ, ಅಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಇನ್ನೂ ಅಪೂರ್ಣವಾಗಿದ್ದು, ಕಾಂಕ್ರೀಟ್ ಸ್ ್ಲಾಬ್‌ಗಳನ್ನು ಎಲ್ಲೆಂದರಲ್ಲಿ ರಾಶಿ ಹಾಕಲಾಗಿದೆ.

ಇನ್ನೊಂದೆಡೆ ವಿದ್ಯಾಪೀಠ ವೃತ್ತದಿಂದ ಬಸವನಗುಡಿಗೆ ಸಂಪರ್ಕ ಕಲ್ಪಿಸುವ ಕತ್ರಿಗುಪ್ಪೆ ಮುಖ್ಯರಸ್ತೆಯಲ್ಲಿಯೂ ಕೊಳವೆ ಅಳವಡಿಕೆ ಕಾಮಗಾರಿ ನಡೆದಿದ್ದು, ಮಣ್ಣು ಮುಚ್ಚಿದ ಭಾಗಕ್ಕೆ ಮಾತ್ರ ಎರಡು ತಿಂಗಳ ಬಳಿಕ ಅಲ್ಲಲ್ಲಿ ತೇಪೆ ಹಾಕಲಾಗಿದೆ. ಭೂಗತ ಕೆಬಲ್ ಹಾಗೂ ಕೊಳವೆ ಅಳವಡಿಕೆಗಾಗಿ ಅದೇ ರಸ್ತೆಯಲ್ಲಿ ಈಗ ಮತ್ತೆ ಅಗೆಯ ಲಾಗುತ್ತಿದೆ.

'ಬೆನ್ನಾಂತವರು ಭೂಗತ ಕೆಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು, ವಿದ್ಯಾಪೀಠ ವೃತ್ತದಿಂದ ಬಸವನಗುಡಿ ಕಡೆ ಸಾಗುವ ಕತ್ರಿಗುಪ್ಪೆ ಮುಖ್ಯರಸ್ತೆಯನ್ನು ಎರಡು ತಿಂಗಳ ಹಿಂದೆ ಅಗೆದಿದ್ದರು. ಕೆಲ ದಿನಗಳು ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ರಸ್ತೆ ತುಂಬಾ ಮಣ್ಣೆನ ರಾಶಿ ಅವರಿಸಿಕೊಂಡಿತ್ತು. ಸಂಪೂರ್ಣ ಕಿತ್ತುಹೋದ ರಸ್ತೆಗೆ ಮಾರ್ ಡಾಂಬರೀಕರಣ ಮಾಡುವ ಬದಲು, ಕಿತ್ತ ಕಡೆ ಮಾತ್ರ ತೇಪೆ ಹಾಕಲಾಗಿದೆ. ಎರಡು ಮಳೆ ಬಂದಲ್ಲಿ ರಸ್ತೆ ಮತ್ತೆ ಸಂಪೂರ್ಣ ಹಾಳಾಗಿದೆ' ಎಂದು ಸ್ಥಳೀಯರು ದೂರುತ್ತಾರೆ. ಈ ಮುಖ್ಯ ರಸ್ತೆಗೆ ಹೊಂದಿ ಕೊಂಡಿರುವ ಅಡ್ಡರಸ್ತೆಗಳಲ್ಲೂ ಕೊಳವೆ ಹಾಗೂ ಭೂಗತ ಕೆಬಲ್ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಗಣಗಳೇ ಅಳವಡಿಸಿದ ಕಡೆ ಮಣ್ಣು ಮುಚ್ಚಲಾಗಿದೆ. ರಸ್ತೆ ಉಬ್ಬುತಗ್ಗಿನಿಂದ ಕೂಡಿರುವ ಕಾರಣ ದ್ವಿಚಕ್ರ ವಾಹನ ಸವಾರರು ಸಮಸ್ಯೆ ಎದುರಿಸುತ್ತಿದ್ದಾರೆ.

ದಟ್ಟಣೆ ಹೆಚ್ಚಳ: ಬ್ಯಾಂಕ್ ಕಾಲೊನಿಯಿಂದ ವಿದ್ಯಾಪೀಠ ವೃತ್ತದವರೆಗೆ ರಸ್ತೆ ಹದಗೆಟ್ಟಿದ್ದು, ಭೂಗತ ಕೆಬಲ್ ಹಾಗೂ ಕೊಳವೆಗಳ ಅಳವಡಿಕೆಗಾಗಿ ಕೆಲವೆಡೆ ರಸ್ತೆಗಳನ್ನು ಅಗೆದು ಮಣ್ಣು ಮುಚ್ಚಲಾಗಿದೆ. ಈ ರಸ್ತೆ ಅಲ್ಲಲ್ಲಿ ಕಿತ್ತುಹೋಗಿದ್ದು, ವಾಹನ ಸವಾರರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಬೆಳಿಗ್ಗೆ ಮತ್ತು ಸಂಜೆಯ ಅವಧಿ ದಟ್ಟಣೆ ಹೆಚ್ಚಾಗುತ್ತಿದೆ. ಬಸವನಗುಡಿ, ಚಾಮರಾಜಪೇಟೆಗೆ ಈ ರಸ್ತೆ ಸಂಪರ್ಕಿಸುವ ಕಾರಣ, ನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಈ ರಸ್ತೆಯಲ್ಲಿಯೇ ಸಂಚರಿಸಲೇಬೇಕಾಗಿದೆ. ಕೊಳವೆಗಳು, ಕಾಂಕ್ರೀಟ್ ಸ್ ್ಲಾಬ್‌ಗಳನ್ನು ರಸ್ತೆಯಲ್ಲಿಯೇ ಇರಿಸಿರುವ ಪರಿಣಾಮ, ಸಂಚಾರಕ್ಕೆ ತೊಡಕಾಗಿದೆ.

'ವೈಟ್ ಟಾಪಿಂಗ್ ಕಾಮಗಾರಿ ಕುಂಟುತ್ತಾ ಸಾಗಿದ್ದು ದೂಳಿನಿಂದ ರಕ್ಷಿಸಿ ಕೊಳ್ಳಲು ಹರಸಾಹಸ ಪಡುತ್ತಿದ್ದೇವೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಪ್ರತಿದಿನ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ. ಕೊಳವೆಗಳನ್ನು ಅಳವಡಿಸಿದ ಸ್ಥಳದನ್ನು ಸಮರ್ಪಕವಾಗಿ ಮುಚ್ಚದ ಕಾರಣ ನೀರು ನಿಂತು, ಸಮಸ್ಯೆ ಉಂಟಾಗುತ್ತಿದೆ. ದಟ್ಟಣೆಯಿಂದ ತಪ್ಪಿಸಿ ಕೊಳ್ಳಲು ಅಡ್ಡ ರಸ್ತೆಗಳಲ್ಲಿ ಸಾಗಿದರೆ, ಅಲ್ಲಿಯೂ ರಸ್ತೆಗಳನ್ನು ಅಗೆಯಲಾಗಿದೆ' ಎಂದು ವಾಹನ ಸವಾರರು ಹಾಗೂ ಸ್ಥಳೀಯ ಅಂಗಡಿ ಮಾಲೀಕರು ಬೇಸರ ವ್ಯಕ್ತಪಡಿಸಿದರು.

'ಸಾರ್ವಜನಿಕರಿಗೆ ಸಮಸ್ಯೆಯಾಗಿ ಬಾರದೆಂಬ ಕಾರಣಕ್ಕೇ ಹಂತ ಹಂತವಾಗಿ ಅಗೆದು, ಕೊಳವೆಗಳನ್ನು ಅಳವಡಿಸಿ ಮಾಡಲಾಗುತ್ತಿದೆ. ಈಗಾಗಲೇ ಅಳವಡಿಕೆ ಮಾಡಿದ ಕಡೆ ಸಮರ್ಪಕವಾಗಿ ಮಣ್ಣು ಮುಚ್ಚಲಾಗಿದೆ. ಆದಷ್ಟು ಶೀಘ್ರ ಕಾಮಗಾರಿ ಪೂರ್ಣಗೊಳಿಸಲಾಗು ವುದು' ಎಂದು ಬಿಬಿಎಂಪಿಯ ಎಂಜಿನಿಯರೊಬ್ಬರು ತಿಳಿಸಿದರು.

ಖಾಸಗಿ ಬಸ್‌ಗಳ ನಿರಾಕರಣೆ

ವಿದ್ಯಾಪೀಠ ವೃತ್ತದ ಸುತ್ತಮುತ್ತ ರಸ್ತೆ ಹದಗೆಟ್ಟ ಪರಿಣಾಮ ರಾಜ್ಯದ ವಿವಿಧೆಡೆ ಸಾಗುವ ಖಾಸಗಿ ಬಸ್‌ಗಳು ಈ ಮಾರ್ಗದಲ್ಲಿ ಸಾಗಲು ನಿರಾಕರಿಸುತ್ತಿವೆ. ವಿದ್ಯಾಪೀಠ ವೃತ್ತಕ್ಕೆ ಬರುತ್ತಿದ್ದ ಬಸ್‌ಗಳು, ಶ್ರೀನಿವಾಸ ನಗರ, ಹನುಮಂತನಗರ, ಬಸವನಗುಡಿ ಮೊಲಕ ವಿವಿಧೆಡೆ ತೆರಳುತ್ತಿದ್ದವು. ಬೆಂಗಳೂರು ಪ್ರವೇಶಿಸುವ ಬಸ್‌ಗಳು ಬಸವನಗುಡಿ, ನೆಟ್ಕಲಪ್ಪ ವೃತ್ತದಿಂದ ವಿದ್ಯಾಪೀಠದ ಕಡೆಗೆ ಬರುತ್ತಿದ್ದವು. ಈಗ ಖಾಸಗಿ ಬಸ್‌ಗಳು ಮಾರ್ಗ ಬದಲಿಸುತ್ತಿವೆ. ಇದರಿಂದ ವಿದ್ಯಾಪೀಠ ಹಾಗೂ ಶ್ರೀನಿವಾಸನಗರ ಸುತ್ತಮುತ್ತ ಬಸ್ ಬುಕ್ಕಿಂಗ್ ಮಾಡಿಕೊಂಡವರು ಸಮಸ್ಯೆ ಎದುರಿಸುತ್ತಿದ್ದಾರೆ. ನಿಗದಿತ ಸ್ಥಳ ತಲುಪುವ ಒಂದು ಗಂಟೆ ಮುಂಚಿತವಾಗಿ ದೂರವಾಣಿ ಕರೆ ಮಾಡಿ, ಬಸವನಗುಡಿಗೆ ಬರಲಾಗಿತ್ತೆ ನಿರ್ವಾಹಕರು ಸೂಚಿಸುತ್ತಿದ್ದಾರೆ. ಇನ್ನೊಂದೆಡೆ, ಬೆಂಗಳೂರು ಪ್ರವೇಶಿಸುವ ಬಸ್‌ಗಳು ವಿದ್ಯಾಪೀಠದ ಕಡೆಗೆ ತೆರಳದೆ, ನೆಟ್ಕಲಪ್ಪ ವೃತ್ತದಲ್ಲಿಯೇ ಜನರನ್ನು ಇಳಿಸಲಾಗುತ್ತಿದೆ.

ಅವ್ಯವಸ್ಥೆಯ ಆಗರ

ಹೊಸಕೆರೆಹಳ್ಳಿಯಿಂದ ವಿದ್ಯಾಪೀಠ ವೃತ್ತಕ್ಕೆ ಸಂಪರ್ಕ ಕಲ್ಪಿಸುವ 80 ಅಡಿ ರಸ್ತೆಯಲ್ಲಿ ಪಾದಚಾರಿ ಮಾರ್ಗಗಳು ಅಧ್ವಾನಗೊಂಡಿವೆ. ಕೆಲವೆಡೆ ಪಾದಚಾರಿ ಮಾರ್ಗವೇ ಕಣ್ಮರೆಯಾಗಿದ್ದರೆ, ರಸ್ತೆ ಕಾಮಗಾರಿ ನಡೆದ ಕಡೆ ಪಾದಚಾರಿ ಮಾರ್ಗಕ್ಕೆ ಅಳವಡಿಸಲು ತಂದಿರುವ ಕಾಂಕ್ರೀಟ್ ಸ್ ್ಲಾಬ್‌ಗಳನ್ನು ರಸ್ತೆಯಲ್ಲಿಯೇ ಹಲವು ದಿನಗಳಿಂದ ರಾಶಿ ಹಾಕಲಾಗಿದೆ. ಪಾದಚಾರಿ ಮಾರ್ಗ, ಬಸ್ ತಂಗುದಾಣದ ಬಳಿಯೂ ಅಗೆದು ವಿಟ್ಟ ಕಾರಣ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. ಹಳೆಯ ಕೊಳವೆ, ಕಾಂಕ್ರೀಟ್ ಸ್ ್ಲಾಬ್‌ಗಳು ಎಲ್ಲೆಂದರಲ್ಲಿ ಬಿದ್ದಿವೆ.

ವಿದ್ಯಾಪೀಠ ವೃತ್ತದ ಬಳಿ ಕೊಳವೆ ಅಳವಡಿಕೆ ಕಾಮಗಾರಿಗಾಗಿ 80 ಅಡಿ ರಸ್ತೆಯನ್ನು ಅಗೆದಿರುವುದು(ಎಡಚಿತ್ರ) 80 ಅಡಿ ರಸ್ತೆಯಲ್ಲಿ ಕಾಂಕ್ರೀಟ್ ಸ್ ್ಲಾಬ್ ರಾಶಿ ಹಾಕಿರುವುದು ಚಿತ್ರಗಳು: ಕಿಶೋರ್ ಕುಮಾರ್

ವೈಟ್ ಟಾಪಿಂಗ್ ಕಾಮಗಾರಿ ಕುಂಟುತ್ತಾ ಸಾಗಿದ್ದು ಸಂಚಾರ ಕಷ್ಟಸಾಧ್ಯವಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗುತ್ತಿದೆ
ವಿನೋದ್ ಕುಮಾರ್, ಶ್ರೀನಿವಾಸನಗರ

ರಸ್ತೆ ಕಾಮಗಾರಿಯಿಂದ ವ್ಯಾಪಾರ-ವಹಿವಾಟು ಕಡಿಮೆಯಾಗಿದೆ. ಪಾದಚಾರಿ ಮಾರ್ಗಗಳನ್ನು ಕಿತ್ತು, ಪಿಡಾಜಲಗಾದ ಸ್ಥಿತಿ ನಿರ್ಮಿಸಿತ್ತಿದ್ದಾರೆ
ಸುಮಿತ್ರಾ, ವಿದ್ಯಾಪೀಠದವ್ಯಾಪಾರಿ

ರಸ್ತೆ ಸ್ಥಿತಿ ಹದಗೆಟ್ಟ ಪರಿಣಾಮ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಬಿಟಿಎಂ ಬಂದರೆ ದೂಳು, ಮಳೆ ಬಂದಲ್ಲಿ ಕೆಸರಿನ ಸಮುದ ಸಾಗುವೆಕಾಗಿದೆ. ಕಾಮಗಾರಿಯನ್ನು ಬೇಗ ಮುಗಿಸಬೇಕು
ಸುಕುಮಾರ್, ವಿದ್ಯಾಪೀಠ

ಇ.ಡಿ ದಾಳಿ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳಂ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ಮಾಡಿರುವುದನ್ನು ಖಂಡಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶುಕ್ರವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ರಾಜಕೀಯ ದ್ವೇಷ ಸಾಧನೆಗೆ ಸಾಂವಿಧಾನಿಕ ಸಂಸ್ಥೆಗಳನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದುರುಪಯೋಗ ಮಾಡಿಕೊಂಡಿದೆ ಎಂದು ಆರೋಪಿಸಿ ಪ್ರತಿಭಟನಾಕಾರರು ಘೋಷಣೆ ಕೂಗಿದರು.

'ದೆಹಲಿಯಲ್ಲಿ ಇ.ಡಿ. ಪ್ರಧಾನ ಕಚೇರಿ ಮುಂದೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿ ನೇತೃತ್ವದಲ್ಲಿ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಪೊಲೀಸರು ನಾಯಕರಾದ ಬೃಂದಾ ಕಾರಟ್, ಅಶೋಕ್ ಧವಳೆ, ಮರಿಯಮ್ಮ ಧವಳೆ, ವಿಜೂ ಕೃಷ್ಣನ್, ವಿಕ್ರಮ್ ಸಿಂಗ್, ಅನುರಾಗ್ ಸಕ್ಸೇನಾ ಸೇರಿ ಹಲವರನ್ನು ಬಂಧಿಸಿರುವ ಕ್ರಮ ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ. ಕೇಂದ್ರದ ಫ್ಯಾಸಿಸ್ಟ್ ನಡೆಯನ್ನು ಖಂಡಿಸಲಾಗುವುದು' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಎಂ ದೇಶಾದ್ಯಂತ ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ವಿ.ರಾಘವುಲು ಮಾತನಾಡಿ, 'ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಇ.ಡಿ ಪಿಣರಾಯಿ ಅವರ ನಿವಾಸದ ಮೇಲೆ ನಡೆಸಿದ ದಾಳಿ ರಾಜಕೀಯ ಪ್ರೇರಿತ. ಪಿಣರಾಯಿ ವಿಜಯನ್‌ಗೂ ಎಕ್ಸಲಾಜಿಕ್ ಸೆಲ್ಯೂಷನ್ಸ್ ಪ್ರಕರಣಕ್ಕೂ ಸಂಬಂಧವಿಲ್ಲ. ವೀಣಾ ಅವರ ತಂದೆ ಕಾರಣಕ್ಕಾಗಿ ಅವರನ್ನು ಗುರಿಯಾಗಿಸುವುದು ಸರಿಯಲ್ಲ' ಎಂದರು.

'ಮುಖ್ಯಮಂತ್ರಿ ಪಿ.ವಿ.ಸತೀಶನ್ ಅವರು ಮೇ 27ರಂದು ದೆಹಲಿಯಲ್ಲಿ ಪ್ರಧಾನ ಮಂತ್ರಿ ಅವರನ್ನು ಭೇಟಿಯಾದ ಬಳಿಕ ಈ ದಾಳಿ ನಡೆದಿರುವುದು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಕೊಚ್ಚಿನ್ ಮಿನರಲ್ಸ್ ಮತ್ತು ರೂಟೈಲ್ ಲಿಮಿಟೆಡ್ (ಸಿಎಂಆರ್‌ಎಲ್) ದೈರಿಯಲ್ಲಿ ಹೆಸರುಗಳು ಕಾಣಿಸಿಕೊಂಡಿವೆ ಎಂದು ವರದಿಯಾಗಿರುವ ಹಲವರು ರಾಜ್ಯ ಸರ್ಕಾರದಲ್ಲಿ ಪ್ರಮುಖ ಹುದ್ದೆಗಳನ್ನು ಹೊಂದಿದ್ದಾರೆ' ಎಂದರು.

ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್.ಪ್ರಕಾಶ್ ಸಿಂಹ ಮಾತನಾಡಿ, 'ಸಿಪಿಎಂ ಯಾವುದೇ ತನಿಖಾ ಪ್ರಕ್ರಿಯೆ ಕಡೆಯಿಂದ ಉದ್ದೇಶ ಹೊಂದಿಲ್ಲ. ಆದರೆ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುವುದನ್ನು ಒಪ್ಪಿಕೊಳ್ಳು ವುದಿಲ್ಲ. ವಿರೋಧ ಪಕ್ಷದ ನಾಯಕ ರನ್ನು ಗುರಿಯಾಗಿಸಿಕೊಂಡು ನಡೆಸುತ್ತಿರುವ ಇಂತಹ ದಾಳಿಯನ್ನು ಖಂಡಿಸಲಾಗುವುದು' ಎಂದರು.

ಪೊಲೀಸರ ಮೂರ್ಖತನಕ್ಕೆ ಕೊನೆ ಎಂದು?: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಡೋಷಪೂರಿತ ದೋಷಾರೋಪಪಟ್ಟಿ
- ಬಾಣಸವಾಡಿ ಠಾಣೆಯ ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ವಿಚಾರಣೆ

ಬೆಂಗಳೂರು: ದೋಷಾರೋಪಪಟ್ಟಿಯನ್ನೇ 'ದೋಷಪೂರಿತ'ವಾಗಿ ತಯಾರಿಸಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿದ ಬಾಣಸವಾಡಿ ಠಾಣೆಯ ಇನ್‌ಸ್ಪೆಕ್ಟರ್ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ನಗರದ ಹೆಬ್ಬಾಳಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ಪ್ರಕರಣ ರದ್ದು ಪಡಿಸಬೇಕು' ಎಂದು ಕೋರಿ ಆರ್.ಎಸ್. ಪಾಳ್ಯದ 29 ವರ್ಷದ ಯುವತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು ಶುಕ್ರವಾರ ನಿರ್ಧರಿಸಿತು.

'ಅತ್ಯಹತ್ಯೆಗೆ ಪ್ರಚೋದನೆ (abetment) ನೀಡಿದ ಎಂಬ ಕಾರಣ ವನ್ನು ನಮೂದು ಮಾಡುವಾಗ ಅಲ್ಲಿ ಸಂತ್ರಸ್ತೆ ಅಥವಾ ಸಂತ್ರಸ್ತೆ ಮೃತಪಟ್ಟಿರ ಬೇಕು. ಸಂತ್ರಸ್ತರು ಜೀವಂತ ಇದ್ದಾಗಲೂ ಆತ್ಮಹತ್ಯೆ ಪ್ರಯೋಜನ ನೀಡಿದ ಅಪರಾಧವಾದರೆ, ದೋಷಾರೋಪ ಪಟ್ಟಿ ಸಲ್ಲಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಏಕದಸದಿಸಿದೆ.

'ಈ ಪ್ರಕರಣದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ ಅರ್ಜಿದಾರರ ಪತ್ನಿಯು ಬದುಕಿರುವಾಗ ಕನಿಷ್ಠಾರ್ಹಕರಿ ಮೂಲ ತತ್ವವನ್ನೇ ಮರೆತು ಕಲಂ 108ರ (ಪ್ರಚೋದನೆಯಿಂದ ಆತ್ಮಹತ್ಯೆ) ಅಡಿಯಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿರುವುದು ಮೂರ್ಖತನ' ಎಂದು ಕಿಡಿಕಾರಿದ.

'ಅಜಾಗರೂಕತೆ ಅಥವಾ ಕಾನೂನು ಕ್ರಮ ಕೈಗೊಳ್ಳುವ ಆತುರದಲ್ಲಿ, ಅರ್ಜಿ ದಾರರನ್ನು ಬಂಧಿಸಿಡಲಾಗಿದೆ. ಇದು ತನಿಖೆಯ ಅಪವೇಗ ಮತ್ತು ವ್ಯಕ್ತಿ-ಯೆಬ್ಬರ ವೈಯಕ್ತಿಕ ಸ್ವಾತಂತ್ರ್ಯದ ಬಗ್ಗೆ ಅಸಾವಾದ ಅಸಡ್ಡೆ ಹೊಂದಿರುವುದನ್ನು ಪ್ರತಿಬಿಂಬಿಸುತ್ತದೆ' ಎಂದು ಹೇಳಿ ಅಸಮಾಧಾನವ್ಯಕ್ತಪಡಿಸಿದೆ.

'ತನಿಖಾಧಿಕಾರಿಯು (ಇನ್‌ಸ್ಪೆಕ್ಟರ್) ಕರ್ತವ್ಯ ಲೋಪ ಹಾಗೂ ನಿರ್ಲಕ್ಷ್ಯ ತೋರುವ ಈ ಪ್ರಕರಣ ನ್ಯಾಯಾಂಗದ ಮನಃಸಾಕ್ಷಿಗೆ ಆಘಾತ ಉಂಟು ಮಾಡಿದೆ. ಪ್ರಾಸಿಕ್ಯೂಷನ್ ತುಳಿದಿರುವ ಹಜ್ಜಿ ಹಾಯಿಯಿಂದಾಗಿ ಅರ್ಜಿದಾರರು ಆರು ತಿಂಗಳಿಗೂ ಹೆಚ್ಚು ಕಾಲ ಜೈಲಿನ ಕಂಬಿಗಳ ಹಿಂದೆ ನರಳಬೆಕಾಯಿತು. ಈ ಕೂಡಲೇ ಅರ್ಜಿದಾರರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು' ಎಂದು ಸಕ್ಷಮ ಪ್ರಾಧಿಕಾರಕ್ಕೆ ಆದೇಶಿಸಿದೆ.

ಅಂತೆಯೇ, 'ಅರ್ಜಿದಾರ ಪತಿ ಮತ್ತು ದೂರುದಾರ ಪತ್ನಿ ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವ ನಿರ್ಧಾರವನ್ನು ಮನಸ್ಸಿನಲಿಗಿದೆ' ಎಂದು ನ್ಯಾಯಪೀಠ ಹೇಳಿದೆ.

ವರದಿ ಸಲ್ಲಿಸಿ: 'ತಪ್ಪಿತ್ಯ ಪೊಲೀಸ್ ಅಧಿಕಾರಿಯ ವಿರುದ್ಧದ 'ಇಲಾಖಾ ವಿಚಾರಣೆಯ ವರದಿಯನ್ನು ಮೂರು ತಿಂಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಪ್ರಾಸಿಕ್ಯೂಷನ್ ಗೆ ನಿರ್ದೇಶಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆರ್.ರಂಗನಾಥ ರೆಡ್ಡಿ ವಾದ ಮಂಡಿಸಿದ್ದರು.

ಪ್ರಕರಣ: ಅರ್ಜಿದಾರ ಮತ್ತು ಪ್ರಕರಣದ ದೂರುದಾರ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದಾರೆ. ಪತಿ-ಪತ್ನಿ ನಡುವೆ ಬಗೆ ನಡೆದಿತ್ತು. ಮಾತನ ಭರದಲ್ಲಿ ಪತ್ನಿ ತಾನು ಅತ್ಯಹತ್ಯೆ ಮಾಡಿಕೊಳ್ಳುವುದಾಗಿ ಹೇಳಿ ಮಯೆಯ ಎರಡನೆಯ ಮಹಡಿಯಿಂದ ಕೆಳಗೆ ಜಿಗಿದಿದ್ದರು. ಪರಿಣಾಮ ಬೆನ್ನುಮೂಳೆ ಮತ್ತು ಕೈ ಮುರಿತ್ತು, ನಂತರ ಸಂಪೂರ್ಣ ಚೇತರಿಸಿಕೊಂಡಿದ್ದರು.

ಪತ್ನಿಯ ಪತಿಯಾ ವಿರುದ್ಧ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು. ದೋಷಾರೋಪಪಟ್ಟಿ ಸಲ್ಲಿಸಿದ್ದರು.

ವೈದ್ಯರಿಗೆ ಹೈಕೋರ್ಟ್ ಜಾಮೀನು

ಬೆಂಗಳೂರು: ಬಾಲಕಿಯೊಬ್ಬಳ ಸ್ನಾನಿಂಗ್ (ಭೂಗೂಲಿಗಿಗ ಪಟ್ಟೆ) ವರದಿಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಪೋಕ್ಸೊ ಕಾಯ್ದೆಯ ನಿಯಮ ಉಲ್ಲಂಘಿಸಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ರೇಡಿಯಾಲಜಿಸ್ಟ್ ಡಾ.ವೈ.ಆರ್.ಹರ್ಷಿತ್ (32) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅರ್ಜಿದಾರರು ಮಂಡ್ಯ ಜಿಲ್ಲೆಯ ಯೊಬ್ಬಳಿಗೆ ಸ್ನಾನಿಂಗ್ ಮಾಡಿದ ವರದಿಗಳು ದೂರಿದ್ದವು.

'ಹರ್ಷಿತ್ ಅವರು ಮಾಹ